ಅಶರೀರವಾಣಿಯಂತೆ ಕೇಳಿಸಿತು. 'ಕತ್ತಲಾಗಿದೆ, ಬೀಚು ಮುಟ್ಟೋಕೆ ಸುಮಾರು ಹೊತ್ತು ಬೇಕು. ಕಿನಾರೆಯಲ್ಲಿ ಒಬ್ಬರೇ ಹೋಗುದು... ರಿಸ್ಕ್ ಉಂಟು' ಎಂದ. ಅವಳು ಏನೋ ಹೇಳುವುದಕ್ಕೆ ಮುಂಚೆ ನದಿ ನೀರಲ್ಲಿ ಕೈತೊಳೆದು, ಆಚೆ ಬೇಲಿಗೆ ಚಾಚಿದ್ದ ಸೈಕಲ್ ತೆಗೆದು, 'ಕುತ್ಕೊಳ್ಳಿ' ಅಂದ. ಏನಾಶ್ಚರ್ಯ! ಸುಮಿ ಸಮ್ಮೋಹನಕ್ಕೆ ಒಳಗಾದವಳ ಹಾಗೆ ವಿಧೇಯಳಾಗಿ ಅವನ ಮಾತನ್ನು ಪಾಲಿಸಿದಳು. ಯಾವುದೋ ಒಳರಸ್ತೆಯಲ್ಲಿ ಸೈಕಲ್ ಹೊಡೆಯುತ್ತಾ, ಮೇನ್ ರೋಡಿಗೆ ಹತ್ತಿಸಿ, ಟಾಗೋರ್ ಬೀಚ್ ಮೇಲೆ ಅವಳನ್ನು ಇಳಿಸಿದವನು ಅಷ್ಟೇ ವೇಗದಲ್ಲಿ ತಿರುಗಿ ಹೋದ. ಅರೆ ಇದೆಂಥಾ ಗಿರಾಕಿ! ಒಂದು ಮಾತಿಲ್ಲ ಕತೆಯಿಲ್ಲ. ನೋ ಥ್ಯಾಂಕ್ಸ್ ನೋ ವೆಲ್ ಕಮ್! ಕನಿಷ್ಠ ಹೆಸರಾದರೂ... ಎಷ್ಟು ಪೊಗರು!

ಸುಮಿಗೆ ತಡ ರಾತ್ರಿವರೆಗೂ ನಿದ್ದೆ ಹತ್ತಲಿಲ್ಲ. ಆ 'ಪೊಗರು' ಹುಡುಗ ಅವಳ ನಿದ್ದೆ ಕದ್ದಿದ್ದ. ಅವಳ ಮನಸ್ಸು ಕಾಳಿ ತೀರದಲ್ಲೇ ಸುಳಿದಾಡುತ್ತಿತ್ತು. ಮಲಗುವಾಗ ಕೊರಳಿಂದ ಜಾರಿ ಹುಡುಗನನ್ನು ಅಪ್ಪಿದ ದುಪ್ಪಟ್ಟಾವನ್ನು ಪಕ್ಕದಲ್ಲಿಟ್ಟದ್ದಳು. ಎತ್ತಿ ಎದೆ ಮೇಲಿಟ್ಟುಕೊಂಡಳು. ಗಲ್ಲಕ್ಕೆ ಒತ್ತಿಕೊಂಡಳು. ದುಪ್ಪಟ್ಟಾಕ್ಕೆ ಅವನೆದೆಯ ಕಂಪು ಅಂಟಿದೆ ಅನಿಸಿತು. ಆಹಾ ಹುಡುಗಾ, ಕಡಲಿಗೆ ವಾಸನೆಯೂ ಇದೆಯಲ್ಲೋ ಎಂದು ನಕ್ಕಳು. ಮೀನಿನ ಸ್ಟಿಕರ್ ಅಂಟಿಸಿ ಲವ್ಲೀ ಶೈಲತ್ತೆ ಎಂದು ವ್ಹಾಟ್ಸಾಪ್ ಮಾಡಿದಳು. 'ಏನೇ ಇದು ನಿನ್ನ ಹೊಸ ಮತ್ಸ್ಯಾವತಾರ?' ಎಂದಳು ಶೈಲತ್ತೆ. 'ಈ ಮೀನಿಗೆ ಸ್ವಲ್ಪ ಕೊಬ್ಬು ಜಾಸ್ತಿ ಶೈಲತ್ತೆ... ಆದರೆ ಫ್ರೆಶ್ ಐತಿ, ಏಕದಂ ತಾಜಾ ತಾಜಾ' ಎಂದು ಸ್ಮೈಲೀಸ್ ಕಳುಹಿಸಿದಳು. ಓಲಾಡುವ ದೋಣಿಯಲ್ಲಿ ಬೆಸ್ತರ ಹುಡುಗ ತನ್ನನ್ನು ಅಲೆಗಳೇಳುವ ಅನಂತದೂರಕ್ಕೆ ಕರೆದೊಯ್ಯುವುದನ್ನು ಕಲ್ಪಿಸಿಕೊಳ್ಳುತ್ತಾ 'ಗುಡ್ ನೈಟ್ ಹುಡುಗಾ!' ಎಂದದ್ದು ಆ ನೀರವ ಕೋಣೆಯಲ್ಲಿ ಪ್ರತಿಧ್ವನಿಸಿತು.

***

ಹುಡುಗನಿಗೆ ಕಡಲ ಬದಿಯ ಜೋಪಡಿಯಲ್ಲೆಂದೂ ಕನಸು ಬೀಳುವುದಿಲ್ಲ. ಕಾರಣವೂ ಇತ್ತು. ಅದು ಮುಂಗಾರು ಶುರುವಾಗುವ ಒಂದು ರಾತ್ರಿ ಬಾಲಕ ಪ್ರೀತಂ ನಿದ್ದೆಯಲ್ಲಿರುವಾಗ ಆದದ್ದು. ಯಾವ ಪೂರ್ವಸೂಚನೆ ಇಲ್ಲದೇ ಕಡಲಿನಲ್ಲಿ ತೂಫಾನು ಗಾಳಿ ಶುರುವಾಗಿ ರಾಕ್ಷಸ ಅಲೆಗಳು ಇವರ ಗುಡಿಸಲವರೆಗೂ ಅಪ್ಪಳಿಸಿದ್ದವು. ಗಾಳಿ ಮತ್ತು ಅಲೆಗಳ ಅಬ್ಬರಕ್ಕೆ ಗುಡಿಸಲಿನ ಒಂದು ಪಕ್ಕ ಕುಸಿದು ಬಿದ್ದಾಗಲೇ ತಾಯಿ ಮಗ ಇಬ್ಬರೂ ಎದ್ದು ಬೆಚ್ಚಿಬಿದ್ದದ್ದು. ಪ್ರೀತಂನ ಬಾಲ್ಯಸಹಜ ಸಿಹಿಕನಸು ಬಂಡೆಗಪ್ಪಳಿಸಿದ ಅಲೆಯಂತೆ ಛಿದ್ರಗೊಂಡಿತ್ತು. ಸಮುದ್ರದ ಆರ್ಭಟಕ್ಕೆ ತಾಯಿಮಗ ಮಾತ್ರವಲ್ಲ, ಮೀನುಗಾರರ ಕೇರಿಯೇ ರಾತ್ರಿಯಿಡೀ ಜಾಗರದಲ್ಲುಳಿಯಬೇಕಾಯ್ತು. ಆ ರಾತ್ರಿ ಇನ್ನೂ ಹೆಚ್ಚಿನ ಹಾನಿಯಿಲ್ಲದೇ ಹೇಗೋ ಕಳೆದುಹೋಗಿತ್ತು. ಆದರೆ ಕಡಲ ಕೊರೆತದಿಂದ ಜೋಪಡಿ ಮುಕ್ಕಾದ ನಂತರ, ತಾಯಿಮಗ ಇಬ್ಬರಿಗೂ ರಾತ್ರಿಯೆಂದರೆ ಭಯದಲ್ಲೇ ಇರುವಂತಾಗಿತ್ತು. ಹುಡುಗನ ತಾಯಿ ಗುಲಾಬಿ ಅವರಿವರ ನೆರವಿನಿಂದ ಚೂರು ಮೇಲ್ಬದಿಗೆ ಮನೆಯೆಂದರೆ ಮನೆಯೂ ಅಲ್ಲದ, ಜೋಪಡಿಯೆಂದರೆ ಜೋಪಡಿಯೂ ಅಲ್ಲದ ಸೂರೊಂದನ್ನು ಕಟ್ಟಿಕೊಂಡು ಬದುಕಿಗೆ ಮರಳಿದ್ದಳು, ನಿಜ. ಆದರೆ ತದನಂತರ ಹುಡುಗನಿಗೆ ಮತ್ತೆಂದೂ ಕನಸಿನ ಲೋಕ ತೆರೆದುಕೊಳ್ಳಲಿಲ್ಲ. ಅಕಸ್ಮಾತ್ ಕನಸು ಬಿದ್ದರೂ ಬೆಚ್ಚಿ ಬೆಚ್ಚಿ ಬೀಳುತ್ತಿದ್ದ.

ಆದರೆ ಇಂದು ಕಣ್ತೆರೆದೇ ಇದ್ದರೂ ಕನಸುಗಳು ಅವನನ್ನು ಓಲೈಸುತ್ತಿವೆ. ಆ ಹುಡುಗಿಯ ದುಪ್ಪಟ್ಟಾ ತನ್ನೆದೆಗಿನ್ನೂ ನವಿರಾಗಿ ಸ್ಪರ್ಶಿಸುತ್ತಿದೆ ಅನಿಸುತ್ತಿದೆ. ಒಳಗಿರುವ ಗುಲಾಬಿಗೆ ಮಗ ಬರಿಗೈಲಿ ಬಂದಿರುವುದು ನಾಳೆ ದಿನದ ಚಿಂತೆಗೆ ಕಾರಣವಾಗಿದೆ. ಗಾಳಕ್ಕೆ ಕೆಂಸ, ನೊಗ್ಲಿ, ಕುರುಡಿಯಂಥ ಕಾಸು ಗಿಟ್ಟಿಸುವ ನಾಲ್ಕಾರು ಹೊಳೆಮೀನುಗಳನ್ನು ಹಿಡಿದು ತರುತ್ತಿದ್ದ ಮಗ ಇಂದು ಖಾಲಿಕೈಲಿ ಬಂದಿದಾನೆ. ಅಂದರೆ ನಾಳೆ ಫಿಶಿಂಗ್ ಬೋಟಿನವರಿಂದ ಖರೀದಿಸಿದ ಮೀನು ಮಾರಿಯೇ ಕಾಸು ಹುಟ್ಟಿಸಬೇಕು. ಕೊಂಡ ಮೀನು ಮಾರಿ ಬರುವ ಗಳಿಕೆ ಹೊಟ್ಟೆಬಟ್ಟೆಗೆ ಏನೂ ಸೋಲಿಲ್ಲ, ಖರೆ. ಮೇಲ್ಖರ್ಚು ಏನಾದರೂ ಬಂತೋ, ಪರದಾಡಬೇಕಾಗುತ್ತದೆ. ಮಗ ಹೊಳೆಮೀನು ಹಿಡಿದು ತಂದರೆ ಅದರಿಂದ ಸಿಗುವ ಕಾಸು ಗುಲಾಬಿಯ 'ಉಳಿತಾಯ'ದ ಖಾತೆಗೆ ಎಂದು ವಿಶೇಷ ಡಬ್ಬಿಯಲ್ಲಿ ಜಮಾ ಆಗುತ್ತಿತ್ತು. ಇಂದು ಅವನ ಗಾಳಕ್ಕೆ ಯಾವ ಮೀನೂ ಕಚ್ಚಲಿಲ್ಲ ಕಾಣ್ತದೆ. ಕುಚ್ಚಲಕ್ಕಿ ಅನ್ನ, ಒಣಮೀನು ಪಳದಿ ಕಣ್ಣುಮುಚ್ಚಿ ಉಂಡಿದ್ದಾನೆ. ಅವನ ಮನಸ್ಸು ಬೇರೆಲ್ಲೋ ಇರುವುದು ಅವಳ ಗಮನಕ್ಕೂ ಬಂದಿದೆ. ಅದೇನೆಂದು ಕೇಳುವ ಧೈರ್ಯ ಬರಲಿಲ್ಲ. 'ಪಾತಿದೋಣಿಯಲ್ಲಿ ಮೀನು ಹಿಡಿಯೂದು ಅಂದ್ರೆ ಹಿಂಗೇ. ಸಿಕ್ಕಿದ್ರೆ ಶಿಕಾರಿ, ಇಲ್ಲಾಂದ್ರೆ ಭಿಕಾರಿ... ಈ ಕೆಲ್ಸ ಬ್ಯೆಡ, ಬೋಟಿಗೆ ಹೋತಿ... ನೀ ಒಬ್ಬಳೇ ಎಷ್ಟಂತ ದುಡೀತಿ, ಆಯಿ?' ಎಂದು ಮತ್ತೆ ಅದೇ ವಿಷಯ ಎತ್ತಿದರೆ, ಎನ್ನುವ ಭಯದಲ್ಲಿ ಗುಲಾಬಿ ಸುಮ್ಮನಿದ್ದಳು. ಆ ಹಳೆಯ ನೆನಪು ಅವಳಿಗೆ ಇಷ್ಟವಾಗುವುದಿಲ್ಲ.

ಇವನು ಹುಟ್ಟಿ ನಾಲ್ಕು ತಿಂಗಳಾಗಿತ್ತು, ಅಷ್ಟೇ! ಘೋರ ಮಳೆಗಾಲದ ನಂತರ ಆಳ ಸಮುದ್ರದಲ್ಲಿ ಮೀನುಗಾರಿಕೆಗೆ ನಿಷೇಧ ಮುಗಿದಿತ್ತು. ನೂಲು ಹುಣ್ಣಿಮೆ ದಿನ ಮೀನಿನ ಬಾಲಕ್ಕೆ ಜನಿವಾರ ಕಟ್ಟಿ ಬಿಟ್ಟರೆ ಕಡಲಿನ ಒಡೆಯ ಕುಬೇರ ಒಲಿಯುವನು ಎಂಬದು ಬೆಸ್ತರ ನಂಬಿಕೆ. ಅಂಥ ಅಚಲ ನಂಬಿಕೆಯೊಂದಿಗೆ ಮೀನುಗಾರರೆಲ್ಲ ಹಬ್ಬ ಆಚರಿಸಿ ಸಂಭ್ರಮದಿಂದ ಫಿಶಿಂಗಿಗೆ ಇಳಿದಿದ್ದರು. ಗುಲಾಬಿ ಗಂಡ ಗಣಪತಿ ಬೈತಕೋಲ್ ಭಾವನೊಂದಿಗೆ ತನ್ನ 'ಮತ್ಸ್ಯಾಂಜನೇಯ' ದೋಣಿ ಮೇಲೆ ಮೀನು ಹಿಡಿಯಲು ಹೋದಂವ ಜೀವಂತವಾಗಿ ವಾಪಸು ಬರಲೇ ಇಲ್ಲ. ನಾಲ್ಕಾರು ನಾಟಿಕಲ್ ಮೈಲು ದೂರಸಮುದ್ರದಲ್ಲಿ ಬಿರುಗಾಳಿಗೆ ಸಿಲುಕಿದ ದೋಣಿ ಮಗುಚಿ ಮುಳುಗಡೆ ಆಗಿತ್ತು. ಬೈತಕೋಲ್ ಭಾವ ಹೇಗೋ ಜೀವ ಉಳಿಸಿಕೊಂಡಿದ್ದ. ಒಂದೆರಡು ದಿನಗಳ ನಂತರ ಗುಣಪತಿ ಬೆಳಂಬಾರ ದಂಡೆಯಲ್ಲಿ ಹೆಣವಾಗಿ ತಾಟಿದ್ದ. ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದ ಗಣಪತಿ ನಗುವ ನಗಿಸುವ ಅಪಾರ ಜೀವನ ಪ್ರೀತಿಯ ಮನುಷ್ಯನಾಗಿದ್ದ. ಬೋಟಿ ಕೆಲಸಕ್ಕೆ ಹೋದನೆಂದರೆ ಕಡಲನ್ನೇ ಬಂಧಿಸಬಲ್ಲೆ ಎಂಬಂತೆ ಬಲೆ ಎತ್ತುತ್ತಿದ್ದ. ಎದೆಯುಬ್ಬಿಸಿ ನಡೆವ ರೀತಿಯಿಂದಲೇ ಜೊತೆ ಮೀನುಗಾರರಿಗೂ ಕಡಲಿನಲ್ಲೂ ಸಾಹಸಗೈವ ಧೈರ್ಯ ಉಕ್ಕಿಸುತ್ತಿದ್ದ. 'ಕೈಕಾಲು ಕಟ್ಟಿ ಕಡ್ಲಿಗೆ ಹೊತ್ತಾಕಿದ್ರೂ ಬಾಯಲ್ ಮೀನ್ ಕಚ್ಕಾ ಬರುವಂತಾ ಮನುಷ್ಯ'ನ ಇಂಥ ಸಾವಿಗೆ ಇಡೀ ಮೀನುಗಾರರ ಕೇರಿಯೇ ಮರುಗಿತ್ತು. ಬೆಸ್ತರ ಬದುಕಿಗೆ ಆಸರೆಯಾಗುವ ಕಡಲೇ ಆಗಾಗ ಇಂತಹ ದುರಂತಕ್ಕೂ ಕಾರಣವಾಗುವುದು, ನಿಜ. ಹೀಗಾಗಿಯೇ ಸಮುದ್ರಬೇಲೆಯಲ್ಲಿ ವೈರಾಗ್ಯದ ಭಾವವೊಂದು ಸದಾ ಬಿಸಿಲು ಕಾಯಿಸಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ!

ಗಂಡ ಸತ್ತ ದುಃಖದಿಂದ ಗುಲಾಬಿಯ ಎದೆಯೊಡೆದರೂ, ಮಡಿಲಲ್ಲಿಯ ಹಸುಗೂಸು ಅವಳು ಬದುಕಿಗೆ ಮರಳುವುದನ್ನು ಅನಿವಾರ್ಯವಾಗಿಸಿತ್ತು. ಇದಾಗಿ ಹತ್ತೊಂಬತ್ತು ನೂಲು ಹುಣ್ಣಿಮೆಗಳು ಬಂದಿವೆ ಹೋಗಿವೆ. ಮೀನುಗಾರರೆಲ್ಲ ನೂಲು ಹಬ್ಬದ ದಿನ ಸಮುದ್ರವನ್ನು ಪೂಜಿಸುವುದು ಸಂಪ್ರದಾಯವಾದರೂ ಗುಲಾಬಿಗೆ ಮಾತ್ರ ಕಡಲ ಮೇಲಿನ ಮುನಿಸು ಹಾಗೇ ಉಳಿದುಕೊಂಡಿದೆ. ಅಂದಿನಿಂದ ಇಂದಿನವರೆಗೂ ಅವಳು ಎಂದೂ ಕಡಲನ್ನು ಪೂಜಿಸಿಲ್ಲ. ಮಗನನ್ನು ಕಡಲಿಗೆ ಇಳಿಸುವುದಿಲ್ಲ ಎಂದು ಆಣೆಯನ್ನೂ ಮಾಡಿಕೊಂಡಿದ್ದಾಳೆ. ಮಗ ಬೆಳೆದು ರಟ್ಟೆ ಗಟ್ಟಿಮುಟ್ಟು ಆಗುತ್ತಿರುವುದನ್ನು ಆಸೆಗಣ್ಣಿಂದ ನೋಡುವ ಬೋಟಿಯವರು, 'ಹೊಂತಗಾರ ಮಗನ ಮನೆಲಿ ಕುಳ್ಸಿ ನೀ ಯೆಂತಕೆ ಆ ನಮೂನಿ ದುಡೀತಿಯೆ?' ಎಂದು ಹಂಗಿಸುತ್ತಿದ್ದರು. ಆದರೆ ಗುಲಾಬಿಯ ನಿರ್ಧಾರ ಅಚಲವಾಗಿತ್ತು. ದಿನಾಲೂ ಬೆಳಗ್ಗೆ ಧಕ್ಕೆಗೆ ಬಂದು, ಒಳ್ಳೆಯ ಮೀನು ನೋಡಿ ಖರೀದಿಸಿ, ಮುಟ್ಟಿತುಂಬಿಕೊಂಡು ಮೀನುಪೇಟೆಗೆ ಹೋಗಿ ಮಾರಿದರೆ ಅಲ್ಲಿಗೆ ಆ ದಿನದ ಬದುಕು ಮುಗಿಯುತ್ತದೆ. ಗುಲಾಬಿಯ ಮೀನೆಂದರೆ ತಾಜಾ ಎಂಬುದು ಕೊಳ್ಳುವವರಿಗೆ ಗೊತ್ತು.

ಮುಗ್ಗಿದ ಮೀನನ್ನು ಆಕೆ ಎಂದೂ ಕೊಳ್ಳುವುದಿಲ್ಲ, ಮಾರುವುದಿಲ್ಲ. ಆ ನಂಬಿಕೆಯಿಂದ ಖರೀದಿಸುವವರು 'ಚಿಪ್ ತೆಗ್ಯೆ, ಮೆತ್ತಗಾಗಿದೆ, ಮುಗ್ಗಿದೆ' ಎಂದೆಲ್ಲ ಕಿರಿಕಿರಿ ಮಾಡುವುದಿಲ್ಲ. ಗುರ್ತಿನವರು 'ಬಗೀಲೆ ಕೊಯ್ದುಕೊಡು, ಬಾಯಿ' ಎಂದು ಕೇಳಿದರೆ, ಮುಖ ಮುರ್ಕಂಬುಕಾಗದೇ ಕೂತಲ್ಲೇ ಮೀನಿನ ತಲೆಬಾಲ ಕತ್ತರಿಸಿ, ಕಳ್ಳು ತೆಗೆದು, ಹೊಟ್ಟೆ ಚೊಕ್ಕಮಾಡಿ ಸಾರಿಗಾದರೆ ಹೋಳು ಮಾಡಿ, ಫ್ರೈಗಾದರೆ ಇಡೀ ಇಟ್ಟು ಕೊಡ್ತಾಳೆ. ಇಂಥ ವಿಶ್ವಾಸದಿಂದಾಗಿ ಅವಳ ಬಳಿಯೇ ಮೀನು ಕೊಳ್ಳುವ ಖಾಯಂ ಗಿರಾಕಿಗಳು ಇದ್ದಾರೆ. ಹೀಗಾಗಿಯೇ ಅವಳು ಹೇಗೋ ಈವರೆಗೂ ಬದುಕನ್ನು ಸಂಭಾಳಿಸಿದ್ದಾಳೆ. ಮಗನನ್ನು ಮಾತ್ರ ಸರ್ವತ್ರಾ ಕಡಲಿಗೆ ಕಳಿಸೂದಿಲ್ಲ ಎಂದು ಬಬ್ಬರ್ಯ ಗುಡಿ ಮುಂದೆ ಪ್ರಮಾಣ ಮಾಡಿದ್ದಾಳೆ. ಮಗನಿಂದ ವಚನವನ್ನೂ ಪಡೆದಿದ್ದಾಳೆ. ಮಗ ಡಿಪ್ಲೊಮೋ